# ಸ್ಟಾರ್‌ಗಳ ಭರಾಟೆ ಜೋರು ಸಿನಿಮಾ ಹಬ್ಬ ಶುರು





**ಕಳೆದೊಂದು ವರ್ಷದಿಂದ ಅಜ್ಞಾತವಾಸದಲ್ಲಿದ್ದ ಹೌಸ್‌ಫುಲ್ ಬೋರ್ಡುಗಳ ಕಣ್ಣಲ್ಲೀಗ ವಿಶೇಷ ಹೊಳಪಿದೆ. ಅದಕ್ಕೆ ಕಾರಣವೂ ಇದೆ!**

■ ಪದ್ಮನಾಭ ಭಟ್

## 'ಚಿತ್ರಮಂದಿರ ತುಂಬಿದೆ'

ಈ ಬೋರ್ಡ್ ಅನ್ನು ಚಿತ್ರಮಂದಿರಗಳ ಎದುರಿನಲ್ಲಿ ನೋಡಲು ಸಿನಿಮಾಮಂದಿ ಹಾತೊರೆಯುತ್ತಿರುತ್ತಾರೆ. ಹೆಚ್ಚೂಕಮ್ಮಿ ಕಳೆದ ಒಂದು ವರ್ಷದಿಂದ ಈ ಬೋರ್ಡ್ ಚಿತ್ರಮಂದಿರದ ಯಾವುದೋ ಮೂಲೆಯಲ್ಲಿ ಬಿದ್ದುಕೊಂಡಿತ್ತು. ಬಣ್ಣಗೆಟ್ಟು, ತುಕ್ಕು ಹಿಡಿದು ತನಗೆ ಮರುಜೀವ ಕೊಡುವವರಿಗಾಗಿ ಕಾಯುತ್ತಿತ್ತು.

ಕಳೆದ ನವೆಂಬರ್‌ನಲ್ಲಿ ಈ ಬೋರ್ಡು ಸ್ಟೋರ್‌ರೂಮಿನಿಂದ ತೆವಳುತ್ತಲೇ ಬಂದು ಚಿತ್ರಮಂದಿರಗಳ ಎದುರೇನೋ ನಿಂತುಕೊಂಡಿತು. ಆದರೆ ಮೊದಲಿನ ಹೊಳಪಾಗಲಿ, ತ್ರಾಣವಾಗಲಿ ಅದಕ್ಕೆ ಇರಲಿಲ್ಲ. ಜೋರು ಗಾಳಿಬೀಸಿದರೆ ಮುರಿದುಬೀಳುತ್ತದೇನೋ ಎಂಬಷ್ಟು ನಿತ್ರಾಣವಾಗಿ ಹಾಗೂ ಹೀಗೂ ನಿಂತಿತ್ತಷ್ಟೆ. ಕಾರಣವಿಷ್ಟೆ: ಪ್ರೇಕ್ಷಕರ ಪಾಲಿಗೆ ಚಿತ್ರಮಂದಿರದ ಬಾಗಿಲು ತೆರೆದಿತ್ತಾದರೂ ಒಟ್ಟಾರೆ ಆಸನಗಳಲ್ಲಿ ಅರ್ಧದಷ್ಟು ಮಾತ್ರ ಪ್ರೇಕ್ಷಕರಿಗೆ ಬಿಟ್ಟುಕೊಡಲು ಅನುಮತಿ ಸಿಕ್ಕಿತ್ತು. ಹೀಗಾಗಿ ಕೆಲವು ಅರ್ಧಚಿತ್ರಮಂದಿರಕ್ಕೇ ಹೌಸ್‌ಫುಲ್ ಬೋರ್ಡ್ ಹಾಕಿ ನಿರ್ದೇಶಕರು ಸಮಾಧಾನಪಟ್ಟರೂ ನಿರ್ಮಾಪಕರ ಜೇಬು ಮಾತ್ರ ಹಗುರವಾಗಿಯೇ ಉಳಿದಿತ್ತು.

ಅಂತೂ ಚಿತ್ರಮಂದಿರದ ಎಲ್ಲ ಆಸನಗಳನ್ನು ಪ್ರೇಕ್ಷಕರಿಗೆ ಬಿಟ್ಟುಕೊಡಲು ಸರ್ಕಾರ ಅನುಮತಿ ನೀಡಿದೆ. ಹೌಸ್‌ಫುಲ್ ಬೋರ್ಡು ಮತ್ತೆ ಆಶಾವಾದವನ್ನು ತುಂಬಿಕೊಂಡು ಹೊಸದಾಗಿ ಸುಣ್ಣ ಬಣ್ಣಬಳಿದುಕೊಂಡು, ಕಾಲು ಗಟ್ಟಿಮಾಡಿಕೊಂಡು ಗೇಟಿನತ್ತ ನಿರೀಕ್ಷೆಯ ಕಣ್ಣು ಬಿಡುತ್ತಿದೆ. ಅದರ ಸಂತೋಷಕ್ಕೆ ಕಡಿವಾಣ ಹಾಕಿರುವ ರಾಜ್ಯಸರ್ಕಾರ, ಫೆ. 28ರವರೆಗೂ ಶೇ. 50ರಷ್ಟು ಮಾತ್ರ ಚಿತ್ರಮಂದಿರ ಭರ್ತಿಗೆ ಅವಕಾಶ ನೀಡಿತ್ತು. ಆದರೆ ನಮ್ಮ ಸ್ಯಾಂಡಲ್‌ವುಡ್ ಪ್ರಭಾವವೇನು ಕಡಿಮೆಯೇ? ಆ ನಿರ್ಬಂಧ ಹಾಕಿದ ದಿನದೊಳಗೇ ಅದನ್ನು ತೆಗೆಸಿ, ಪೂರ್ಣಪ್ರಮಾಣದಲ್ಲಿ ಪ್ರೇಕ್ಷಕರ ಪ್ರವೇಶಕ್ಕೆ ಅನುಮತಿ ದೊರಕಿಸಿಕೊಂಡಿವೆ.

ಸರ್ಕಾರದ ಅನುಮತಿ ಸಿಕ್ಕಿದ ಮಾತ್ರಕ್ಕೆ ತಾನು ರಾಜಮರ್ಯಾದೆಯಿಂದ ಚಿತ್ರಮಂದಿರದ ಎದುರು ಹೋಗಿ ನಿಲ್ಲುವುದು ಸಾಧ್ಯವಿಲ್ಲ ಎನ್ನುವುದು ಅದಕ್ಕೂ ಗೊತ್ತು. ತನಗೆ ಜೀವ ಬರಬೇಕಾದರೆ ಸರ್ಕಾರದ ಅನುಮತಿಗಿಂತ ಪ್ರೇಕ್ಷಕರ ಆಶೀರ್ವಾದ ಮುಖ್ಯವೆಂಬುದೂ ಅದಕ್ಕೆ ಗೊತ್ತು. ಈಗ ಬಿಡುಗಡೆಗೆ ಸಜ್ಜಾಗಿರುವ ಸಣ್ಣಪುಟ್ಟ ಸಿನಿಮಾಗಳಿಂದ ತನ್ನ ಆಸೆ ಈಡೇರುವುದಿಲ್ಲ ಎಂಬುದನ್ನು ಬಲ್ಲರೂ ಬೋರ್ಡಿನ ಕಣ್ಣುಗಳಲ್ಲೀಗ ವಿಶೇಷ ಹೊಳಪಿದೆ. ನಾಳೆಗಳ ಬಗ್ಗೆ ನಿರೀಕ್ಷೆಯಿದೆ. ಯಾಕೆಂದರೆ ಅದರ ದೃಷ್ಟಿಯೀಗ ಬಿಡುಗಡೆಗೆ ಸಜ್ಜಾಗಿರುವ ಕನ್ನಡದ ಸ್ಟಾರ್ ನಟರ ಸಾಲು ಸಾಲು ಸಿನಿಮಾಗಳ ಮೇಲೆ ನೆಟ್ಟಿದೆ.

ಹೌದು, ಗಾಂಧಿನಗರದ ಗಲ್ಲಿಗಳಲ್ಲಿ ಜಾತ್ರೆಯ ಸಂಭ್ರಮ ಮತ್ತೆ ಹುಟ್ಟಿಕೊಳ್ಳುವ ನಿರೀಕ್ಷೆಯಲ್ಲಿ ಇಡೀ ಚಿತ್ರರಂಗವೇ ಎದುರು ನೋಡುತ್ತಿದೆ. ಸಿನಿಮಾಮಂದಿಗೆ ಚಿತ್ರರಂಗದ ಚೇತರಿಕೆಯ ನಿರೀಕ್ಷೆಯಾದರೆ, ಪ್ರೇಕ್ಷಕರಿಗೆ ತಮ್ಮ ನೆಚ್ಚಿನ ಸ್ಟಾರ್ ನಟನನ್ನು ವರ್ಷಗಳ ನಂತರ ದೊಡ್ಡ ಪರದೆಯ ಮೇಲೆ ಕಣ್ತುಂಬಿಕೊಳ್ಳುವ ದಾವಂತ. ಇದಕ್ಕೆ ತಕ್ಕ ಹಾಗೆ ಸ್ಟಾರ್ ನಟರ ಸಿನಿಮಾಗಳ ಬಿಡುಗಡೆ



